ಭೂ–ಸ್ವಾಧೀನ ಪ್ರಕ್ರಿಯೆ

3168 (3327); ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಬಾಗಲಕೋಟೆ)

ಅ) ಕೃಷ್ಣಾ ಮೇಲ್ದಂಡೆಯ ಹಿನ್ನೀರಿಗಾಗಿ ಕೇವಲ ಬಾಗಲಕೋಟೆ ನಗರಕ್ಕಾಗಿ ಮಾತ್ರ 524 ಮೀಟರ್ ಕೌಂಟರ್‌ವರೆಗೆ ಭೂಸ್ವಾಧೀನ ಪ್ರಕ್ರಿಯೆ ನಡೆದಿರುತ್ತದೆ; ಇದೇ 524 ಮೀಟರ್ ಕೌಂಟರ್ ಹಿನ್ನೀರಿಗಾಗಿ ಸುಮಾರು ಶೇತ್ಕಿ ಜಮೀನುಗಳು ಹಾಗೂ ಬಾಗಲಕೋಟೆ ತಾಲೂಕಿನ ಸುಮಾರು ಗ್ರಾಮಗಳು 524ರಲ್ಲಿ ಭೂಸ್ವಾಧೀನಗೊಳ್ಳುವ ಪ್ರಕ್ರಿಯೆ ನಡೆದಿದೆಯೇ;

ಆ) ನಡೆದಿದ್ದಲ್ಲಿ, ಇದು ಯಾವ ಹಂತದಲ್ಲಿದೆ; ಈ ಬಗ್ಗೆ ಗ್ರಾಮೀಣ ಪ್ರದೇಶದ ಸಂತ್ರಸ್ಥರಿಗೆ ಹೊಸದಾಗಿ ಒದಗಿಸಲಾದ ಪುನರ್ವಸತಿ ಸೌಲಭ್ಯಗಳು ಯಾವುವು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಈ ಯೋಜನೆಗಳಿಂದ ಒಟ್ಟು 20 ಗ್ರಾಮಗಳು ಬಾಧಿತವಾಗಿದ್ದು ಈ ಪೈಕಿ ಬಾಗಲಕೋಟೆ ತಾಲ್ಲೂಕಿನ ನಾಲ್ಕು ಗ್ರಾಮಗಳು ಬಾಧಿತಗೊಳ್ಳುತ್ತಿದ್ದು ಅದಕ್ಕೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡಿದೆ. ಹಾಗೆಯೇ ಯೋಜನೆಗಳಿಂದ ಒಟ್ಟು 94,640 ಎಕರೆ ಶೇತ್ಕಿ ಜಮೀನು ಮುಳುಗಡೆಯಾಗುವ ಸಾಧ್ಯತೆ ಇದ್ದು, ಈಗಾಗಲೇ 10,667 ಎಕರೆ ವಿಸ್ತೀರ್ಣ ಜಮೀನಿಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಆ) ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಹಂತದ ವಿವರ ಈ ಕೆಳಗಿನಂತಿರುತ್ತದೆ:

ಬಾಗಲಕೋಟೆ ನಗರಕ್ಕೆ ಸಂಬಂಧಿಸಿದಂತೆ	2421 ಕಟ್ಟಡಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 1894 ರನ್ವಯ ಕಲಂ 6(1) ಪೂರ್ಣಗೊಳಿಸಿದ್ದು, ಐತೀರ್ಪು ರಚಿಸುವ ಹಂತದಲ್ಲಿರುತ್ತದೆ. 2043 ಎಕರೆ ಜಮೀನನ್ನು ಪುನರ್‌ವಸತಿಗಾಗಿ ಭೂಸ್ವಾಧೀನ ಕಾಯ್ದೆ ಕಲಂ 1894 ರನ್ವಯ ಕಲಂ 4(1) ಹೊರಡಿಸಿದ್ದು, ಜೆ.ಎಂ.ಸಿ. ಹಂತದಲ್ಲಿದೆ.

ಗ್ರಾಮೀಣ ಪ್ರದೇಶ ಕುರಿತು	ಮುಳುಗಡೆ ಹೊಂದಲಿರುವ ಜಮೀನಿನ ಒಟ್ಟು ಕ್ಷೇತ್ರ 94,640 ಎಕರೆ ಪೈಕಿ 10667 ಎಕರೆ ಜಮೀನನ್ನು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರನ್ವಯ ಪ್ರಾರಂಭಿಕ ಅಧಿಸೂಚನೆ ಕಲಂ 11(1)ನ್ನು ಹೊರಡಿಸಲಾಗಿದೆ. 20 ಗ್ರಾಮಗಳ ಪುನರ್ವಸತಿ ಕೇಂದ್ರಕ್ಕಾಗಿ: 4747 ಎಕರೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರನ್ವಯ ಪ್ರಾರಂಭಿಕ ಅಧಿಸೂಚನೆ ಕಲಂ 11(1)ನ್ನು ಹೊರಡಿಸಲಾಗಿದೆ. ಬಾಧಿತಗೊಳ್ಳುವ 20 ಗ್ರಾಮಗಳಲ್ಲಿ 4070 ಕಟ್ಟಡಗಳ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರನ್ವಯ ಪ್ರಾರಂಭಿಕ ಅಧಿಸೂಚನೆ ಕಲಂ 11(1)ನ್ನು ಹೊರಡಿಸಲಾಗಿದೆ.

ಗ್ರಾಮೀಣ ಪ್ರದೇಶದ ಸಂತ್ರಸ್ಥರಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ರನ್ವಯ ಪುನರ್‌ವಸತಿ ಸೌಲಭ್ಯಗಳನ್ನು ಒದಗಿಸಲಾಗುವುದು.